# ಶ್ರೀಮಾತೆಯವರ ಸ್ಮೃತಿ

ಮೂಲ ಬಂಗಾಳಿ : **ಮುಕುಂದ ಬಿಹಾರಿ ಸಾಹಾ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**



ಢಾಕಾ ಜಿಲ್ಲೆಯ ಸಿಂಗಾಯಿರ್ ಗ್ರಾಮದಲ್ಲಿ, ೧೮೯೦ ನೇ ಇಸವಿಯಲ್ಲಿ ನಾನು ಹುಟ್ಟಿದೆ. ಅವಿಭಜಿತ ಬಂಗಾಳದ ಈ ಸಣ್ಣ ಹಳ್ಳಿಯಿದ್ದುದು ಢಾಕಾ ನಗರದಿಂದ ಸುಮಾರು ೩೫ ಮೈಲು ದೂರದಲ್ಲಿ. ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣನಾದ ನಾನು ೧೯೦೮ರಲ್ಲಿ ಕಲ್ಕತ್ತೆಗೆ ಬಂದು, ಅಲ್ಲಿನ ಸ್ಕಾಟಿಷ್ ಚರ್ಚ್ ಕಾಲೇಜಿಗೆ ಸೇರಿಕೊಂಡೆ. ಝಾಮಾಪುಕುರಿನಲ್ಲಿ ಒಂದೆಡೆ ನಾನು ವಾಸವಾಗಿದ್ದೆ. ಒಂದು ದಿನ ನನ್ನ ಸ್ನೇಹಿತನೊಬ್ಬನು ಶ್ರೀರಾಮ ಕೃಷ್ಣರ ಪ್ರಮುಖ ಗೃಹಸ್ಥ ಶಿಷ್ಯರಲ್ಲಿ ಒಬ್ಬರಾದ ಶ್ರೀ 'ಮ' ಅಥವಾ 'ಶ್ರೀರಾಮಕೃಷ್ಣ ಕಥಾಮೃತ'ದ ಕರ್ತೃವಾದ ಮಹೇಂದ್ರ ನಾಥ ಗುಪ್ತರ ಬಗ್ಗೆ ಹೇಳಿದ. ಆ ಸ್ನೇಹಿತನೊಂದಿಗೆ ಒಂದು ದಿನ ನಾನು ಹೊರಟು, ಶ್ರೀ 'ಮ' ಅವರಿಗೆ ಪ್ರಣಾಮ ಮಾಡಿ ಬರಲು ಹೋದೆ. ಶ್ರೀರಾಮಕೃಷ್ಣರ ಭಾವಧಾರೆ ಅಥವಾ ಶ್ರೀರಾಮಕೃಷ್ಣರ ಪ್ರಭಾವಲಯದೊಂದಿಗೆ ನನ್ನ ಸಂಪರ್ಕ ಇಲ್ಲಿಂದ ಆರಂಭ ವಾಯಿತು. ನಡುನಡುವೆ ನಾನು 'ಮ' ಅವರ ಬಳಿಗೆ ಹೋಗು ತ್ತಿದ್ದೆ. ಕ್ರಮೇಣ ಅವರೊಂದಿಗೆ ನಿಕಟ ಬಾಂಧವ್ಯ ನನಗುಂಟಾ ಯಿತು. ಕೆಲವು ದಿನಗಳು ಈ ರೀತಿ ಸಾಗಿದವು. ಅಷ್ಟರಲ್ಲಿ ನಾನು ಬಿ.ಎ. ತರಗತಿಗೆ ಸೇರಿಕೊಂಡೆ. ಒಂದು ದಿನ ಶ್ರೀ 'ಮ' ಅವರು ನನಗೆ ಬೇಲೂರು ಮಠಕ್ಕೆ ಹೋಗಿ ಬರಲು ಹೇಳಿದರು. ನಾನು ಬೇಲೂರು ಮಠಕ್ಕೆ ಹೋದೆ. ಅಲ್ಲಿ ಸ್ವಾಮಿ ಬ್ರಹ್ಮಾನಂದ ಮಹಾ ರಾಜ್, ಸ್ವಾಮಿ ಶಿವಾನಂದ ಮಹಾರಾಜ್, ಸ್ವಾಮಿ ಅದ್ಭುತಾನಂದ ಮಹಾರಾಜ್, ಸ್ವಾಮಿ ಪ್ರೇಮಾನಂದ ಮಹಾರಾಜ್, ಸ್ವಾಮಿ ಸುಬೋಧಾನಂದ ಮಹಾರಾಜ್ ಮೊದಲಾದ ಶ್ರೀರಾಮಕೃಷ್ಣರ ನೇರ ಶಿಷ್ಯರ ದರ್ಶನಲಾಭ ನನಗೆ ಲಭಿಸಿತು. ಕ್ರಮೇಣ ಅವರ ಆಶೀರ್ವಾದ ಹಾಗೂ ಪ್ರೀತಿ ಇವುಗಳಿಗೆ ನಾನು ಪಾತ್ರನಾದೆ.

ಒಂದು ದಿನ ಶ್ರೀ 'ಮ' ಅವರಿಂದಲೇ ಕೇಳಿದೆ, ಬಾಗ್ ಬಜಾರಿನಲ್ಲೇ ಶ್ರೀಮಾತೆಯವರು ಇದ್ದಾರೆಂದು. 'ಮ' ಅವರ ವಿಷಯವಾಗಿ ತಿಳಿಸಿದ್ದ ಆ ಸ್ನೇಹಿತನನ್ನೇ ಕರೆದುಕೊಂಡು ನಾನು ಬಾಗ್‌ಬಜಾರಿನಲ್ಲಿರುವ 'ಶ್ರೀಮಾತೆಯವರ ಮನೆ'ಗೆ ('ಉದ್ಬೋಧನ') ಹೋದೆ. ಅದು ನಡೆದುದು ಕ್ರಿ.ಶ.೧೯೧೦ರಲ್ಲಿ. ಕೆಳ ಅಂತಸ್ತಿನಲ್ಲಿ ಸ್ವಾಮಿ ಶಾರದಾನಂದರಿದ್ದರು. ಅವರ ಅನುಮತಿ ಪಡೆದು ಒಂದನೇ ಅಂತಸ್ತಿನಲ್ಲಿದ್ದ ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೋದೆ. ಅಸಾಧಾರಣವಾದ ಮಾತೃಮೂರ್ತಿ! ಶ್ರೀಮಾತೆ ಸಾಮಾನ್ಯವಾಗಿ ಗಂಡಸರೊಂದಿಗೆ ಮಾತನಾಡು ತ್ತಿರಲಿಲ್ಲ. ಆದರೆ ನಾವು ಅವರ ಬಳಿಗೆ ಪ್ರಣಾಮ ಮಾಡಲು ಹೋದಾಗ ಅವರು ನಮ್ಮೊಂದಿಗೆ ಮಾತನಾಡಿದರು. ನಾವು ಏನು ಮಾಡುತ್ತಿದ್ದೇವೆ, ಕಲ್ಕತ್ತೆಯಲ್ಲಿ ಎಲ್ಲಿ ವಾಸವಾಗಿದ್ದೇವೆ, ನಮ್ಮ ಊರು ಯಾವುದು ಇತ್ಯಾದಿಗಳ ಬಗ್ಗೆ ಶ್ರೀಮಾತೆ ಕೇಳಿದರು. ಶ್ರೀಮಾತೆಯವರ ಮಾತು ಅತ್ಯಂತ ಮಧುರವಾಗಿತ್ತು. ಅವರ ಎರಡು-ಮೂರು ಮಾತುಗಳಿಂದಲೇ ನಮ್ಮ ಪ್ರಾಣ, ಮನಸ್ಸು ತುಂಬಿಬಂದವು. ನಾನಂದೆ: ''ಅಮ್ಮಾ, ನಾನು ದೀಕ್ಷೆ ಪಡೆದು ಕೊಳ್ಳಲೆ?'' ಶ್ರೀಮಾತೆ ಮಂದಹಾಸ ಬೀರಿ ಹೇಳಿದರು, ''ಒಳ್ಳೆಯದಲ್ಲವೇ ಮಗೂ, ನಾಳೆ ಬೆಳಿಗ್ಗೆ ಬಂದುಬಿಡು.'' ನಾನಂದೆ, ''ಏನನ್ನು ತರಬೇಕು?'' ಅದಕ್ಕೆ ಶ್ರೀಮಾತೆ, ''ಏನೂ ಬೇಡ, ಎರಡು ಹೂ ಸಾಕು'' ಎಂದರು. ಮರುದಿನ ನಾನು ಎರಡು ಹೂಗಳೊಂದಿಗೆ 'ಶ್ರೀಮಾತೆಯವರ ಮನೆ'ಗೆ ಹೋದೆ. ಮಂತ್ರದೀಕ್ಷೆ ನಡೆಯಿತು. ಶ್ರೀಮಾತೆಯವರ ಒಬ್ಬರು ಸೇವಕರು ಕೇಳಿದರು: ''ಸಿಹಿತಿಂಡಿ ಏನೂ ತರಲಿಲ್ಲವೆ?'' ಆ ಮಾತನ್ನು ಕೇಳಿ ನನಗೆ ತುಂಬ ನಾಚಿಕೆಯಾಯಿತು. ಮರುದಿನ ಕಾಲೇಜಿಗೆ ರಜೆ ಯಿತ್ತು; ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೊರಟೆ. ನಿನ್ನೆಯ ಅದೇ ಮಾತು ನನ್ನ ಮನಸ್ಸಿನಲ್ಲಿತ್ತು. ಅಂಗಡಿಯಿಂದ ಸ್ವಲ್ಪ ಸಿಹಿತಿಂಡಿ ಖರೀದಿಸಿ ಕೊಂಡುಹೋದೆ. ಹಿಂದಿನ ದಿನ ಸಿಹಿ ತಿಂಡಿಯ ಬಗ್ಗೆ ವಿಚಾರಿಸಿದ ಸೇವಕ ಮಹಾರಾಜರು ಹೇಳಿದರು, ''ಈಗ ಎಲ್ಲಿಂದ ಬಂದೆ?'' ನಾನಂದೆ, ''ನೇರ ಕಾಲೇಜಿನಿಂದ ಬಂದೆ.'' ಸಿಹಿತಿಂಡಿಯ ಪ್ಯಾಕೆಟ್ ಮಹಾರಾಜರಿಗೆ ತೋರಿಸಿ ಹೇಳಿದೆ, ''ಶ್ರೀಮಾತೆಯವರಿಗಾಗಿ ತಂದಿದ್ದೇನೆ.'' ಅದಕ್ಕೆ ಮಹಾ ರಾಜ್ ಹೇಳಿದರು, ''ಪೆದ್ದು ಹುಡುಗ, ಕಾಲೇಜಿನ ಬಟ್ಟೆಬರೆ ಬದಲಾಯಿಸದೆ ಸಿಹಿತಿಂಡಿ ತಂದೆಯಾ? ಇದನ್ನು ಶ್ರೀಮಾತೆ ತಿನ್ನುವರೆ?'' ಆಗ ನನ್ನ ಮನಸ್ಸಿಗೆ ತುಂಬ ಸಂಕಟವಾಯಿತು. ಶ್ರೀಮಾತೆಗೆ ಪ್ರಣಾಮವನ್ನಷ್ಟೇ ಮಾಡಿ ಬರುತ್ತೇನೆ ಎಂದು

ಕೊಂಡು ನಾನು ಎರಡನೇ ಅಂತಸ್ತಿಗೆ ಹೋದೆ. ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಏಳುತ್ತಿದ್ದಾಗ ಅವರು ಕೇಳಿದರು: ''ಏನಪ್ಪಾ ಹುಡುಗ, ನನಗಾಗಿ ನೀನು ಸಿಹಿತಿಂಡಿ ತಂದಿದ್ದೀಯಾಲ್ಲಾ , ಅದನ್ನು ಕೊಡುವುದಿಲ್ಲವೆ?'' ಶ್ರೀಮಾತೆ ಅಂತರ್ಯಾಮಿನಿ — ಅವರಿಗೆ ಏನನ್ನೂ ಹೇಳಬೇಕಾಗಿಲ್ಲ. ಆದರೆ ಕಾಲೇಜಿನಿಂದ ಬಂದು, ಅದೇ ಬಟ್ಟೆಯಲ್ಲಿ ತಂದ ಸಿಹಿತಿಂಡಿಯನ್ನು ಶ್ರೀಮಾತೆ ತಿನ್ನಲಾರರು. ಆದ್ದರಿಂದ ನಾನು ಸುಮ್ಮನೆ ನಿಂತುಬಿಟ್ಟೆ. ಶ್ರೀಮಾತೆ ಹೇಳಿದರು, ''ಏನಪ್ಪಾ, ಕೊಡು ಅದನ್ನು.'' ಶ್ರೀಮಾತೆ ಕೈಚಾಚಿದರು. ನಾನು ಹಿಂಜರಿಯುತ್ತಲೇ ಸಿಹಿತಿಂಡಿಯ ಸಣ್ಣ ಪ್ಯಾಕೆಟ್ಟನ್ನು ಹೊರತೆಗೆದೆ. ನನ್ನ ಕಣ್ಣುಗಳಲ್ಲಿ ತುಸು ನೀರು ಕೂಡ ಬಂತು. ನಾನಂದೆ, ''ನಾನು ಬಟ್ಟೆ ಬದಲಾಯಿಸಿಲ್ಲ , ಅಮ್ಮಾ. ಕಾಲೇಜಿನಿಂದ ನೇರ ನಿಮ್ಮ ಬಳಿಗೆ ಬಂದಿದ್ದೇನೆ.'' ಅದಕ್ಕೆ ಶ್ರೀಮಾತೆ, ''ಅದರಿಂದ ಏನಾಯಿತು? '' ಎಂದರು. ಸಿಹಿತಿಂಡಿ ಪ್ಯಾಕೆಟ್ಟಿನಿಂದ ಸ್ವಲ್ಪ ಬಾಯಿಗೆ ಹಾಕಿಕೊಂಡು, ಅನಂತರ ಇಡೀ ಪ್ಯಾಕೆಟ್ಟನ್ನು ನನ್ನ ಕೈಯಲ್ಲಿಟ್ಟು, ''ತಿನ್ನು'' ಎಂದರು ಶ್ರೀಮಾತೆ. ಅವರ ಆ ಪ್ರಸಾದ ನನಗೆ ಅಮೃತದಂತೆ ಅನ್ನಿಸಿತು.

ಒಂದು ದಿನ ನಾನು ಶ್ರೀಮಾತೆಯವರನ್ನು ಕೇಳಿದೆ: ''ಅಮ್ಮಾ, ಮುಂದೆ ನಾನೇನು ಮಾಡಲಿ?'' ಅದಕ್ಕೆ ಅವರೆಂದರು: ''ಇನ್ನೇನು ಮಾಡುವೆ? ಸತ್ಪಥದಲ್ಲಿ ನಡೆಯುತ್ತ ನೀನು ಒಳ್ಳೆಯ ಜೀವನ ನಡೆಸು. ಮದುವೆ ಮಾಡಿಕೊಳ್ಳಬೇಡ. ಶಿಕ್ಷಕನಾಗು, ಶಿಷ್ಯಂದಿರಿಗೆ ತರಬೇತಿ ನೀಡು.'' ನಾನು ಶ್ರೀಮಾತೆಯವರಿಗೆ ಹೇಳಿದೆ, ''ಆದರೆ, ಮದುವೆ ಮಾಡಿಕೊಳ್ಳದೆ ಇದ್ದು, ಒಂದು ವೇಳೆ ಕೆಟ್ಟ ದಾರಿ ಹಿಡಿದರೆ?'' ಅದಕ್ಕೆ ಅವರು, ''ಈ ಕಡೆ ಬಾ'' ಎಂದು ತಮ್ಮ ಸಮೀಪಕ್ಕೆ ಕರೆದರು. ಅವರ ಬಳಿಗೆ ಹೋದಾಗ, ನನ್ನ ತಲೆಯ ಮೇಲೆ ಕೈಯಿಟ್ಟು, ''ನಿನಗೇನೂ ಭಯ ಬೇಕಿಲ್ಲ ಮಗೂ'' ಎಂದರು.

೧೯೧೮ ನೇ ಇಸವಿಯಲ್ಲಿ ನಾನು ಎಂ.ಎ.ಉತ್ತೀರ್ಣನಾದೆ. ಪರೀಕ್ಷೆಯ ಫಲಿತಾಂಶ ಪ್ರಕಟವಾಗುವ ಮೊದಲೇ ನಾನು ರಾಮಪುರಹಾಟ್‌ನಲ್ಲಿರುವ ಉನ್ನತ ಇಂಗ್ಲಿಷ್ ವಿದ್ಯಾಲಯದ ಮುಖ್ಯೋಪಾಧ್ಯಾಯನಾಗಿ ನನ್ನ ಕರ್ತವ್ಯವನ್ನು ಆರಂಭಿಸಿದೆ. ಶ್ರೀಮಾತೆ, 'ಶಿಕ್ಷಕನಾಗು' ಎಂದಿದ್ದರು. ಅಧ್ಯಾಪಕನಾಗುವ ಮೂಲಕವೇ ನನ್ನ ಸೇವೆ ಆರಂಭವಾಯಿತು, ಈ ಶಿಕ್ಷಕ ವೃತ್ತಿ ಎಂದಿಗೂ ನಿಲ್ಲಲಿಲ್ಲ. ಶ್ರೀಮಾತೆ ಆದೇಶಿಸಿದ್ದರು, 'ಶಿಷ್ಯಂದಿರಿಗೆ ತರಬೇತಿ ನೀಡು' ಎಂದು. ಅದನ್ನು ಪಾಲಿಸಲು ಇಂದಿಗೂ ಪ್ರಯತ್ನಿಸುತ್ತ ನಾನು ಜೀವಿಸುತ್ತಿದ್ದೇನೆ. ಎಷ್ಟರಮಟ್ಟಿಗೆ ನಾನು ಸಫಲನಾಗಿದ್ದೇನೋ ಶ್ರೀಮಾತೆಯವರೇ ಬಲ್ಲರು. (ಅವಿವಾಹಿತನಾಗಿಯೇ ಉಳಿದಿದ್ದ ಮುಕುಂದ ಬಿಹಾರಿ ಸಾಹಾ ಮುಂದೆ ೧೯೫೧ರಲ್ಲಿ ನಿವೃತ್ತಿ ಹೊಂದಿದರು; ಮುಂದೆ ರಾಮಪುರ ಹಾಟ್‌ನಿಂದ ಏಳು ಕಿ.ಮೀ. ಪಶ್ಚಿಮ ಭಾಗದಲ್ಲಿರುವ ತುಂಬುನಿ ಗ್ರಾಮದಲ್ಲಿ ತಾವೊಬ್ಬರೇ ಶ್ರಮವಹಿಸಿ ಶ್ರೀರಾಮಕೃಷ್ಣ-ವಿವೇಕಾನಂದರ ಆದರ್ಶಗಳನ್ನು ಹೊತ್ತ 'ಶ್ರೀರಾಮಕೃಷ್ಣ ಶಿಕ್ಷಾಪೀಠ' ಎಂಬ ಬಾಲಕರ ವಸತಿ ವಿದ್ಯಾಲಯವನ್ನು ಆರಂಭಿಸಿದರು. ದಟ್ಟ ಅರಣ್ಯಗಳಿಂದ ತುಂಬಿರುವ ತುಂಬುನಿ ಗ್ರಾಮದಲ್ಲಿ ಸಂತಾಲ ಜನರೇ ಅಧಿಕ; ಮುಂದೆ ಈ ಗ್ರಾಮಕ್ಕೆ 'ಶ್ಯಾಮ್-ಪಹಾಡಿ' ಎಂದು ಹೆಸರಿಡಲಾಯಿತು.)

ಆಗ ನಾನು ರಾಮಪುರಹಾಟ್‌ಗೆ ಬಂದು ಒಂದೆರಡು ವರ್ಷಗಳಷ್ಟೇ ಆಗಿತ್ತು. ಧುಬಲ್‌ಹಾಟಿಯ ರಾಜ ಮನೆತನದಿಂದ ಒಂದು ಕನ್ಯೆಯೊಂದಿಗೆ ವಿವಾಹವಾಗುವ ಪ್ರಸ್ತಾಪ ನನಗೆ ಬಂದಿತ್ತು. ಶ್ರೀಮಾತೆ ನನಗೆ, 'ಮದುವೆ ಮಾಡಿಕೊಳ್ಳಬೇಡ' ಎಂದಿದ್ದರು. ಹೀಗಾಗಿ ನಾನು ಈ ಪ್ರಸ್ತಾಪವನ್ನು ಸಾರಾಸಗಟಾಗಿ ತಿರಸ್ಕರಿಸಬಹುದಾಗಿತ್ತು. ಆದರೆ ನಾನು ಹಾಗೆ ಮಾಡದೆ, ನೇರ ಬಾಗ್‌ಬಜಾರಿನಲ್ಲಿದ್ದ ಶ್ರೀಮಾತೆಯವರ ಬಳಿಗೆ ಹೋದೆ. ಅವರಿಗೆ ಎಲ್ಲ ವಿಷಯವನ್ನೂ ತಿಳಿಸಿದೆ. ಶ್ರೀಮಾತೆ ಅದಕ್ಕೆ, ''ಯಾಕೆ ಮಗೂ, ಈಗ ನೀನು ಚೆನ್ನಾಗಿದ್ದೀಯಲ್ಲ. ನಿನ್ನ ಮೂಲಕ ಈಗ ಹಲವು ಮಂದಿ ಬಾಲಕರಿಗೆ ಉಪಯೋಗವಾಗುತ್ತಿದೆ. ಇನ್ನೂ ಮುಂದೆ ಕೂಡ ಆಗಲಿದೆ. ನೀನು ಮುಂದೆ ಬಹಳ ದೊಡ್ಡ ಕಾರ್ಯಗಳನ್ನು ಮಾಡುವೆ'' ಎಂದರು. ''ಆದರೆ, ಅಮ್ಮಾ, ನಡುನಡುವೆ ನನಗೆ ಸಂಸಾರ ಮಾಡಿಕೊಳ್ಳಬೇಕೆಂದು ಬಯಕೆ ಉಂಟಾಗುತ್ತಿದೆ'' ಎಂದೆ ನಾನು. ಅದಕ್ಕೆ ಅವರು, ''ನಿನಗೆ ಮುಂದೆ ದೊಡ್ಡ ಸಂಸಾರವೇ ಆಗಲಿದೆ, ನೋಡು'' ಎಂದರು. ನಾನಂದೆ, ''ಅಮ್ಮಾ, ಆದರೆ ನನಗೆ ಹೀಗೆ ಜೀವನಪರ್ಯಂತ ಇರುವುದು ಸಾಧ್ಯವೆ? ಎಂದಾದರೂ ಮಾನಸಿಕ ದೌರ್ಬಲ್ಯ ಉಂಟಾದರೆ?'' ಆಗ ಶ್ರೀಮಾತೆ ದೃಢತೆಯಿಂದ ಹೇಳಿದರು, ''ಅದಕ್ಕಾಗಿ ನೀನು ಚಿಂತೆ ಮಾಡಬೇಡ. ಕಲಿಯುಗದಲ್ಲಿ ಮಾನಸಿಕ ಪಾಪ, ಪಾಪವಲ್ಲ. ಯಾವಾಗ ಮನಸ್ಸು ದುರ್ಬಲವಾಯಿತು ಅನ್ನಿಸುವುದೋ, ಆಗ ಶ್ರೀರಾಮಕೃಷ್ಣರನ್ನು ನೆನೆದುಕೋ. ನನ್ನನ್ನು ನೆನೆದುಕೋ.''

ಇಂದು ಜೀವನದ ಅಂತಿಮ ಘಟ್ಟವನ್ನು ತಲುಪಿರುವ ನಾನು ಗಮನಿಸುತ್ತೇನೆ,[೧] ಶ್ರೀಮಾತೆಯವರ ಆಶೀರ್ವಾದದಿಂದಲೇ ನಾನು ನನ್ನ ಜೀವನವನ್ನು ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರನ್ನು ಆಶ್ರಯಿಸಿ ನಡೆಸುವುದಕ್ಕೆ ಸಾಧ್ಯವಾಯಿತು. ಶ್ರೀಮಾತೆಯವರ ಆಶೀರ್ವಾದದಿಂದ ಈ ಪ್ರಪಂಚದಲ್ಲಿ ನನಗೆ ಯಾವುದೇ ತೊಂದರೆಯುಂಟಾಗದು ಎಂಬುದೇ ನನ್ನ ನಂಬಿಕೆ.[೨]

---

೧ ೧೯೬೨ರ ಮಾರ್ಚ್ ೧೪ರಂದು ಮುಕುಂದವಿಹಾರಿ ಸಾಹಾ ತೀರಿಕೊಂಡರು.

೨ 'ಉದ್ಬೋಧನ', ೧೩೬೮(ಬಂಗಾಳಿ ವರ್ಷ) ಸಂ.೬೪, ಸಂಚಿಕೆ ೩